KARNATAKA LEGISLATIVE ASSEMBLY

ಮಂಗಳವಾರ ೧೫ನೇ ಫೆಬ್ರವರಿ ೧೯೯೪, ಮಾಘ ೨೪, ಶಕ ೧೯೧೫

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧.೨೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಬೆಂಗಳೂರು ನಗರದಲ್ಲಿ ವಾಯು ಮಾಲಿನ್ಯ ಪರೀಕ್ಷಾ ಕೇಂದ್ರಗಳು.

154 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳಿನರಸೀಪುರ) : ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ- ವಿಜ್ಞಾನ ಮತ್ತು ಯಂತ್ರಕಲೆ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿ ವಾಹನಗಳಿಂದ ಹೊರಸೂಸುವ ಮಾಲಿನ್ಯವನ್ನು ಪರಿಶೀಲಿಸಲು ಎಷ್ಟು ಕೇಂದ್ರಗಳನ್ನು ತೆರೆಯಲಾಗಿದೆ?

ಆ) ಜನವರಿ 1993ರಿಂದ ಡಿಸೆಂಬರ್ ಅಂತ್ಯದವರೆಗೆ ಕರ್ನಾಟಕ ಮಾಲಿನ್ಯ ಇಲಾಖೆ ಎಷ್ಟು ವಾಹನಗಳನ್ನು ಬೆಂಗಳೂರು ನಗರದಲ್ಲಿ ಪರೀಕ್ಷಿಸಿದೆ?

ಇ) ಎಷ್ಟು ವಾಹನ ಮಾಲೀಕರಿಗೆ ದಂಡ ವಿಧಿಸಲಾಗಿದೆ?

ಈ) ಅವುಗಳ ಪೈಕಿ ಎಷ್ಟು, ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು, ದ್ವಿಚಕ್ರ ಹಾಗೂ ತ್ರಿಚಕ್ರ ವಾಹನಗಳು.

ಉ) ದ್ವಿಚಕ್ರ ವಾಹನಗಳನ್ನು ವಾಯು ಮಾಲಿನ್ಯದ ಪರೀಕ್ಷೆಯನ್ನು ಕಡ್ಡಾಯ ಮಾಡಿರುವುದರಿಂದ ವಾಹನ ಚಾಲಕರಿಗೆ ಕಿರುಕುಳವಾಗುತ್ತಿರುವುದು ನಿಜವಲ್ಲವೆ?

ಊ) ಹಾಗಿದ್ದಲ್ಲಿ, ದ್ವಿಚಕ್ರ ವಾಹನ ಚಾಲಕರಿಗೆ ಈ ಪರೀಕ್ಷೆಯಿಂದ ವಿನಾಯತಿ ನೀಡಲು ಸರ್ಕಾರ ಪರಿಶೀಲಿಸುತ್ತಿದೆಯೇ?

ಶ್ರೀ ಎನ್.ಜಿ. ಹಾಲಪ್ಪ (ಪರಿಸರ ಮತ್ತು ಜೀವಿಶಾಸ್ತ್ರ ವಿಜ್ಞಾನ ಮತ್ತು ಯಂತ್ರಕಲೆ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ರಾಜ್ಯ ಸಚಿವರು) :

ಅ) ವಾಹನಗಳಿಂದ ಹೊರ ಸೂಸುವ ಮಾಲಿನ್ಯವನ್ನು ಪರೀಕ್ಷಿಸುವ ಕೇಂದ್ರಗಳನ್ನು ಸಾರಿಗೆ ಇಲಾಖೆಯು ತೆರೆಯುವ ಅಧಿಕಾರ ಹೊಂದಿದ್ದು, ಈವರೆಗೆ ಬೆಂಗಳೂರಿನಲ್ಲಿ ಒಟ್ಟಾರೆ 26 ಕೇಂದ್ರಗಳನ್ನು ಸಾರಿಗೆ ಇಲಾಖೆಯು ತೆರೆದಿರುತ್ತದೆ.

ಆ) ವಾಹನಗಳಿಂದ ಉಂಟಾಗುವ ಮಾಲಿನ್ಯವನ್ನು ಪರಿವೀಕ್ಷಣೆ ನಡೆಸುವ ಅಧಿಕಾರವು ಸಾರಿಗೆ ಹಾಗೂ ಪೋಲೀಸ್ ಇಲಾಖೆಗೆ ನೀಡಲ್ಪಟ್ಟಿದ್ದು, ಅನುಕ್ರಮವಾಗಿ 40,018 ಹಾಗೂ 30 ವಾಹನಗಳನ್ನು ಪರೀಕ್ಷಿಸಿದೆ.

ಇ) ವಾಹನ ಮಾಲೀಕರಿಗೆ ದಂಡ ವಿಧಿಸುವ ಪ್ರಾಧಿಕಾರ ಪೋಲೀಸ್ ಹಾಗೂ ಸಾರಿಗೆ ಇಲಾಖೆಗಳು ಹೊಂದಿದ್ದು, ಅನುಕ್ರಮವಾಗಿ 30 ಹಾಗೂ 294 ವಾಹನಗಳ ಮಾಲೀಕರಿಗೆ ದಂಡ ವಿಧಿಸಿದೆ.

ಈ) ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳು- 1
ದ್ವಿಚಕ್ರ ವಾಹನಗಳು - 117
ತ್ರಿಚಕ್ರ ವಾಹನಗಳು - 68
ನಾಲ್ಕು ಚಕ್ರ - 75
ಇತರೆ - 63

ಉ) ಇಲ್ಲ, ಕಾನೂನು ಎಲ್ಲ ಬಗೆಯ ವಾಹನಗಳಿಗೆ ಸಮಾನವಾಗಿ ಅನ್ವಯವಾಗುತ್ತದೆ.

ಊ) ಉದ್ಭವಿಸುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಅವರು ಉತ್ತರದಲ್ಲಿ ಬೆಂಗಳೂರಿನಲ್ಲಿ 26 ಕೇಂದ್ರಗಳನ್ನು ಸಾರಿಗೆ ಇಲಾಖೆಯ ವತಿಯಿಂದ ತೆಗೆದಿದ್ದೇವೆ ಎಂದು ಹೇಳಿದ್ದಾರೆ. ಅದೇ ರೀತಿ ಜಿಲ್ಲಾಮಟ್ಟದಲ್ಲಿ ಏನಾದರೂ ಕೂಡ ಇಂತಹ ಪರಿಶೀಲನೆ ಮಾಡತಕ್ಕಂತಹ ಕೇಂದ್ರಗಳನ್ನು ಆರಂಭ ಮಾಡಿದ್ದಾರೋ ಹೇಗೆ? ಈ 26 ಕೇಂದ್ರಗಳನ್ನು ಯಾವಾಗ ಆರಂಭ ಮಾಡಿದರು ಎನ್ನುವುದನ್ನು ಅವರು ತಿಳಿಸಬೇಕು.

ಶ್ರೀ ಎನ್.ಜಿ. ಹಾಲಪ್ಪ : ಬೇರೆ ಜಿಲ್ಲೆಗಳಲ್ಲಿ ಪ್ರಾರಂಭ ಮಾಡುವುದನ್ನು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಈ ಕೇಂದ್ರಗಳು ಅವರು ಕೊಟ್ಟಿರತಕ್ಕಂತಹ ಅಂಕಿಅಂಶಗಳ ಪ್ರಕಾರ ದ್ವಿಚಕ್ರ ವಾಹನಗಳಲ್ಲಿ ಮಾತ್ರ ಅವರು ಈ ಪರೀಕ್ಷೆ ಮಾಡಿದ್ದಾರೆ. ಹೆಚ್ಚಿಗೆ ಹೊಗೆ ಬಿಡತಕ್ಕಂತಹ ಕೆಎಸ್ಆರ್ಟಿಸಿ ಬಸ್ಸಗಾಗಲಿ, ಹಳೇ ಲಾರಿಗಳಾಗಲಿ, ಅವುಗಳ ಗೋಜಿಗೆ ಈ ಕೇಂದ್ರಗಳು ಅಥವಾ ಅಧಿಕಾರಿಗಳು ಹೋಗಿಲ್ಲ ಎನ್ನುವುದು ಅವರ ಅಂಕಿ ಸಂಖ್ಯೆಗಳಿಂದ ಗೊತ್ತಾಗುತ್ತದೆ. ನಮ್ಮ ಮಂತ್ರಿಗಳು ಬರೀ ಸ್ಕೂಟರ್ ಓಡಿಸುವವರಿಗೆ ಮಾತ್ರ ಈ ನಿರ್ಬಂಧ ಹಾಕಿದರೆ ಸಾಲದು. ಹೆಚ್ಚು ಹೊಗೆ ಬಿಟ್ಟು ಪರಿಸರ ಹದಗೆಡತಕ್ಕಂಥಾದ್ದು, ದೊಡ್ಡ ದೊಡ್ಡ ವಾಹನಗಳಿಂದ ಆಗುತ್ತದೆ ಎನ್ನುವುದನ್ನು ಎಲ್ಲರೂ ಕೂಡ ತಿಳಿದುಕೊಂಡಿದ್ದಾರೆ. ಈ ಹಂತದಲ್ಲಿ ಮಂತ್ರಿಗಳು ನೇರವಾಗಿ ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಹೇಳಿ ಯಾರಿಂದ ಪರಿಸರ ಮಾಲಿನ್ಯ ಹೆಚ್ಚಾಗುತ್ತದೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚನೆ ಕೊಡುತ್ತಾರೆಯೇ?

ಶ್ರೀ ಎನ್.ಜಿ. ಹಾಲಪ್ಪ : ಪರಿಸರ ಮಾಲಿನ್ಯ ಯಾರಿಂದ ಆಗುತ್ತದೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಕಾನೂನು ಪ್ರಕಾರ ತೆಗೆದುಕೊಂಡೇ ತೆಗೆದುಕೊಳ್ಳುತ್ತೇವೆ. ಇವರು ಅವರು ಎಂದು ಬೇರೆ ಬೇರೆ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಹಾಗಿದ್ದ ಮೇಲೆ, ಈ ಕೇಂದ್ರದವರು 117 ದ್ವಿಚಕ್ರ ವಾಹನಗಳನ್ನು ಟೆಸ್ಟ್ ಮಾಡಿದ್ದಾರೆ; ಒಂದೇ ಒಂದು ಕೆಎಸ್ಆರ್ಟಿಸಿ ಬಸ್ ಟೆಸ್ಟ್ ಮಾಡಿದ್ದಾರೆ, 4 ಚಕ್ರಗಳ 75 ವಾಹನಗಳನ್ನು ಟೆಸ್ಟ್ ಮಾಡಿದ್ದಾರೆ. ಬಹುಶಃ ಅವರ ಮಾತು ಕರಾರುವಾಕ್ಕಾಗಿದ್ದರೆ ಈ ಅಂಕಿಸಂಖ್ಯೆಗಳು ಏಕೆ ಬರುತ್ತದೆ ಎಂದು ಅವರು ತಿಳಿದುಕೊಳ್ಳಬೇಕು ಮತ್ತು ದ್ವಿಚಕ್ರ ವಾಹನಗಳಿಂದ ಬರತಕ್ಕಂತಹ ಮಾಲಿನ್ಯಕ್ಕೂ ದೊಡ್ಡ ವಾಹನಗಳಿಂದ ಬರತಕ್ಕಂತಹ ಮಾಲಿನ್ಯಕ್ಕೂ ಹೋಲಿಕೆ ಮಾಡಿದಾಗ ಅದು ನೆಗ್ಲಿಜಿಬಲ್. ಅಂಥವರ ಮೇಲೆ ಉಗ್ರಕ್ರಮ ತೆಗೆದುಕೊಳ್ಳುವುದರ ಬಗ್ಗೆ ತಾವು ಮನಸ್ಸು ಮಾಡುತ್ತೀರಾ?

ಶ್ರೀ ಎನ್.ಜಿ. ಹಾಲಪ್ಪ : ಯಾವ ದ್ವಿಚಕ್ರಗಳಿಂದ ಆಗಲಿ, 4 ಚಕ್ರಗಳಿಂದ ಆಗಲಿ, ಪರಿಸರ ಮಾಲಿನ್ಯಕ್ಕೆ ಯಾವುದಾದರೂ ಸಹ ಒಂದೇ ಆಗುತ್ತದೆ. because all of them emit carbon-monoxide, which is highly dangerous to public life. We cannot distinguish between vehicles, ಕೆಎಸ್ಆರ್ಟಿಸಿ ಒಂದೇ ಎಂದು ಹೇಳೀ

ನಾವು ಎಲ್ಲಾ ಅಂಕಿ ಅಂಶಗಳನ್ನು ಕೊಟ್ಟಿದ್ದೇವೆ. ಅವರ ಮೇಲೆ ಇನ್ನೂ ಸ್ವಲ್ಪ ತೀವ್ರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚನೆ ಕೊಡುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್ : ಅಧ್ಯಕ್ಷರೇ, ಇತರೆ 63 ವಾಹನಗಳು ಎಂದರೆ ಯಾವ ವಾಹನಗಳು ?

(ಉತ್ತರವಿಲ್ಲ)

ವಿಚಾರಣೆಯಲ್ಲಿರುವ ಖೈದಿಗಳ ಸಂಖ್ಯೆ

165 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ): ಮಾನ್ಯ ಗೃಹರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದ ಜೈಲುಗಳಲ್ಲಿರುವ ವಿಚಾರಣಾ ಬಂಧಿಗಳ ಸಂಖ್ಯೆ ಎಷ್ಟು ಮತ್ತು ಅವರುಗಳ ವಯಸ್ಸು ಹಾಗೂ ಎಷ್ಟು ದಿನಗಳಿಂದ ಬಂದಿಗಳಾಗಿದ್ದಾರೆ ಎಂಬ ವಿವರ ನೀಡುವುದು.

ಆ) ಅವರುಗಳಲ್ಲಿ ಅಪ್ರಾಪ್ತ ವಯಸ್ಸಿನ ಬಂದಿಗಳೆಷ್ಟು ? ನಿರ್ದಿಷ್ಟವಾಗಿ 14 ವರ್ಷದೊಳಗಿನವರು ಎಷ್ಟು ಮಂದಿ ಮತ್ತು ಯಾವ ಅಪರಾಧಕ್ಕಾಗಿ ಅವರುಗಳು ಜೈಲಿನಲ್ಲಿದ್ದಾರೆ.

ಇ) ವಿಚಾರಣಾ ಬಂಧಿಗಳ ವಿರುದ್ಧ ಇರುವ ಮೊಕದ್ದಮೆಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಲು ಸರ್ಕಾರವು ಉದ್ದೇಶಿಸಿರುವ ಕ್ರಮಗಳಾವುವು ?

ಶ್ರೀ ಬಿ. ರಮನಾಥ್ ರೈ (ಗೃಹ ರಾಜ್ಯ ಸಚಿವರು.) :

ಅ) ಕರ್ನಾಟಕ ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ದಿನಾಂಕ 15-12-93 ರಂದು ವಿಚಾರಣಾಧೀನ ಬಂಧಿಗಳ ಸಂಖ್ಯೆ ಈ ಕೆಳಗಿನಂತಿದೆ.

ಅ) ಪುರುಷರು - 4827

ಆ) ಮಹಿಳೆಯರು - 148

ಒಟ್ಟು - 4975

ಸದರಿ ವಿಚಾರಣಾಧೀನ ಬಂಧಿಗಳ ವಯಸ್ಸು ಮತ್ತು ಅವಧಿಯ ವಿವರಗಳು ಈ ಕೆಳಕಂಡಂತಿವೆ.

ಅವಧಿ	ಪುರುಷರು	ಮಹಿಳೀಯರು
6 ತಿಂಗಳಿಗಿಂತ ಕಡಿಮೆ	3032	124
6 ರಿಂದ 12 ತಿಂಗಳವರೆಗೆ	795	013
1 ರಿಂದ 2 ವರ್ಷಗಳವರೆಗೆ	627	008
2 ರಿಂದ 3 ವರ್ಷಗಳವರೆಗೆ	310	002
3 ರಿಂದ 4 ವರ್ಷಗಳವರೆಗೆ	54	001
4 ವರ್ಷಗಳಿಗಿಂತ ಮೇಲ್ಪಟ್ಟು	09	-
ಒಟ್ಟು	4827	148
ವಯಸ್ಸು		
16 ವರ್ಷಗಳಿಗಿಂತ ಕಡಿಮೆ		
16 ರಿಂದ 18 ವರ್ಷಗಳವರೆಗೆ	224	08
18 ರಿಂದ 21 ವರ್ಷಗಳವರೆಗೆ	891	29
21 ರಿಂದ 50 ವರ್ಷಗಳವರೆಗೆ	3433	102
50 ವರ್ಷಗಳ ಮೇಲ್ಪಟ್ಟು	279	09
ಒಟ್ಟು	4827	148